ಸ್ನೇಕ್ ಶ್ಯಾಮ್ ತರಹದವರ ಧೈರ್ಯ ನೋಡಿದರೆ ಮೈ ಜುಮ್ಮೆನ್ನುತ್ತದೆ. ಕೊಂಚ ಮೈಮರೆತರೂ ಮೃತ್ಯುವಿನ ದವಡೆಗೆ ನೂಕುವ ಈ ಸಾಹಸದಲ್ಲಿ ಸಾವಿಗೆ ತುತ್ತಾದವರೂ ಇದ್ದಾರೆ. ವಿಷಪೂರಿತ ಹಾವುಗಳನ್ನು ಹಿಡಿಯುವುದು ಹಾಗೂ ಅವುಗಳನ್ನು ಸುರಕ್ಷಿತ ಸ್ಥಳಕ್ಕೆ ಒಯ್ದು ಬಿಡುವುದು, ಒಂದು ವಿಶೇಷ ಕಲೆ ವಿಜ್ಞಾನ ಹಾಗೂ ಪರಿಸರಕ್ಕೆ ಪೂರಕ ಕೆಲಸ.

ನಮ್ಮ ಸಚ್ಚಿದಾನಂದಪುರದಲ್ಲಿ ಆಗಿದ್ದ 'ಸ್ನೇಕ್ ಶ್ಯಾಮ್' ಎಂದರೆ, ನಮ್ಮ ನೆರೆಮನೆಯವರಾದ ರಾಮಪ್ಪಯ್ಯನವರ ಮನೆಯಲ್ಲಿ ತೋಟ ನೋಡಿಕೊಳ್ಳುತ್ತಿದ್ದ ಸುಬ್ಬರಾಯರು. ಅವರೇನು ಇಂದಿನ 'ಸ್ನೇಕ್ ಮ್ಯಾನ್'ಗಳ ತರಹ ಹಾವು ಹಿಡಿಯುತ್ತಿರಲಿಲ್ಲ. ಆದರೆ ಅವರ ಕೈಯಲ್ಲಿ 'ನಾಗರೇಖೆ' ಇದೆ ಎಂದು ಎಲ್ಲರೂ ಹೇಳುತ್ತಿದ್ದರು. ಹೀಗಾಗಿ ಅವರು ಹತ್ತಿರ ಹೋದರೆ, ಸಿಟ್ಟಿನಲ್ಲಿರುವ ಎಂಥ ಹಾವಾದ್ರೂ ಸೈಲೆಂಟಾಗಿ ಬಿಡುತ್ತಿತ್ತು! ಇದಕ್ಕೆ ಯಾವುದೇ ವೈಜ್ಞಾನಿಕ ವಿವರಣೆ ಸಾಧ್ಯವಿಲ್ಲದಿದ್ದರೂ, ಹಾವುಗಳು ಸುಬ್ರಾಯರನ್ನು ಕಂಡರೆ ಹಾಗೆ ವರ್ತಿಸುತ್ತಿದ್ದುದಂತೂ ನಿಜ. ಹೀಗಾಗಿ ನಮ್ಮ ಆಫೀಸ್ ರೂಮಿನೊಳಗೆ ಹೊಕ್ಕು ಬುಸುಗುಡುತ್ತಿದ್ದ ಹಾವನ್ನು ಸೈಲೆಂಟಾಗಿರಿಸಲು ಸುಬ್ಬರಾಯರನ್ನು ಕರೆತಂದೆವು. ಅವರು ಬಂದು ನೋಡಿದರೆ, ಅದೊಂದು ಭಾರಿ ಗಾತ್ರದ ಗೋಧಿ ನಾಗರ!


ಮಲೆನಾಡಿನ ಜನ ಮನೆ ಸಮೀಪ ಹಾವು ಬಂದರೆ, ಅದರೊಡನೆ ಮಾತನಾಡಿ ಅದನ್ನು ದೂರ ಕಳಿಸುವ ಪ್ರಯತ್ನ ಮಾಡುತ್ತಾರೆ! ಅದರಂತೆ ಅಮ್ಮ, 'ನಾಗಪ್ಪಾ ಇದು ಮಕ್ಕಳು–ಮರಿ ಓಡಾಡೋ ಜಾಗ. ಇಲ್ಲಿಗ್ಯಾಕೆ ಬಂದೆ? ಹೋಗು' ಎಂದು ಗಟ್ಟಿದನಿಯಲ್ಲಿ ಹಾವಿಗೆ ಗದರಿಸುತ್ತಿದ್ದಳು. ಆದರೆ ಅವಳ ಈ ಗದರಿಕೆ ಕಿವಿಯೇ ಇರದ ನಾಗಪ್ಪನಿಗೆ ಕೇಳಿಸಬೇಕಲ್ಲ?! ಸುಬ್ರಾಯರು 'ನಾವು ಹಾವನ್ನು ಕಿಟಕಿ ಮೂಲಕ ಹೊರಗೆ ಹೋಗುವಂತೆ ಮಾಡಬೇಕು. ಅದಕ್ಕೆ ಗಾಬರಿಪಡಿಸಿದರೆ ಅದು ಇನ್ನೊಂದು ರೂಮಿಗೆ ಹೋಗಿ ಅಡಗಿಕೊಳ್ಳಬಹುದು. ಹೀಗಾಗಿ ಮೊದಲು ಇಲ್ಲಿರುವ ವಸ್ತುಗಳನ್ನು ಹೊರಗೆ ಸಾಗಿಸಿ ರೂಮ್ ಖಾಲಿ ಮಾಡೋಣ' ಎಂಬ ಸಲಹೆ ಕೊಟ್ಟರು.

ಅಂತೆಯೇ ಹಾವು ಅಡಗಿ ಕುಳಿತಿದ್ದ ಪುಸ್ತಕದ ಕಪಾಟನ್ನು ಹೊರತುಪಡಿಸಿ, ಟೇಬಲ್ ಚೇರ್ ಮಂಚ ಇತ್ಯಾದಿಗಳನ್ನು ಆ ರೂಮಿನಿಂದ ಸುಬ್ಬರಾಯರ ಉಪಸ್ಥಿತಿಯಲ್ಲಿ ಖಾಲಿ ಮಾಡಿದೆವು. ಆ ರೂಮಿನ ಕಿಟಕಿಯ ಎಲ್ಲ ಬಾಗಿಲುಗಳನ್ನು ತೆರೆದಿರಿಸಿದೆವು. ಎತ್ತರದಲ್ಲಿದ್ದ ಆ ಕಿಟಕಿಯನ್ನು ಹಾವು ಹತ್ತಿ ಹೋಗುವುದಾದರೂ ಹೇಗೆ? ಮೊದಲೇ ಸಿಮೆಂಟಿನಲ್ಲಿ ಹಾವುಗಳಿಗೆ ಚಲಿಸುವುದು ಕಷ್ಟ. ಅದಕ್ಕಾಗಿ ಕಿಟಕಿಯ ಸಮೀಪ ಒಂದು ಬೆತ್ತದ ಕುರ್ಚಿ ಇರಿಸಿದೆವು. ಬುಸುಗುಡುವ ಹಾವು, ಅದು ಅಡಗಿ ಕುಳಿತಿದ್ದ ಪುಸ್ತಕದ ಕಪಾಟು ಹಾಗೂ ಬೆತ್ತದ ಚೇರು ಇವುಗಳನ್ನು ಹೊರತುಪಡಿಸಿ, ಆ ರೂಮಿನಲ್ಲಿ ಬೇರೇನೂ ಇರಲಿಲ್ಲ. ಎಲ್ಲಾ ವಸ್ತುಗಳು ಖಾಲಿಯಾದ ಮೇಲೆ ಹಾವು ಹರಿದು ಆಫೀಸ್ ರೂಮಿನ ಪಕ್ಕದಲ್ಲಿದ್ದ ಹಾಲ್ ಪ್ರವೇಶಿಸದಂತೆ ರೂಮಿಗೆ ಬೀಗ ಜಡಿದೆವು. ಹಾಗೆಯೇ ಮನೆಯ ಬೇರೆಲ್ಲಾ ಕಿಟಕಿ ಬಾಗಿಲುಗಳನ್ನು ಭದ್ರ ಮಾಡಿದೆವು. ಹಾವಿಗೆ ಈಗ ತೆರೆದ ಕಿಟಕಿಯ ಮೂಲಕ ಹೊರ ಹೋಗುವ **Exit point** ಸಿದ್ಧವಾಗಿತ್ತು. ಆದರೆ ನಮ್ಮ ಈ ಪ್ಲಾನ್ ಹಾವಿಗೆ ಅರ್ಥವಾಗಬೇಕಲ್ಲ?! ಪಾಪ, ಅದೂ ಸಾಧ್ಯವಾದಷ್ಟು ಬೇಗ ಹೊರಗೆ ಹೋಗುವ ಉದ್ದೇಶವನ್ನೇ ಹೊಂದಿತ್ತಾದ್ದರೂ, ನಾವು ಮಾಡಿಕೊಟ್ಟ ದಾರಿ ಅದಕ್ಕೆ ತಿಳಿಯುವುದಾದರೂ ಹೇಗೆ?

ರಾತ್ರಿ ಆಯ್ತು. ರಾತ್ರಿಯ ಊಟವನ್ನು ಮನೆ ಹೊಕ್ಕಿರುವ, ಈ ಅನಪೇಕ್ಷಿತ, ಭಯಾನಕ ಅತಿಥಿಯ ಬಗ್ಗೆಯೇ ಯೋಚಿಸುತ್ತಾ ಮುಗಿಸಿದ ಮೇಲೆ, ಅಪ್ಪ–ಅಮ್ಮ ಇಷ್ಟು ಹೊತ್ತಿಗೆ ಹಾವು ಹೊರಗೆ ಹೋಗಿರಬಹುದು ಒಮ್ಮೆ ಪರೀಕ್ಷಿಸಿ ನೋಡೋಣ ಎಂದು ಯೋಚಿಸಿ ಆಫೀಸ್ ರೂಂನ ಬಾಗಿಲ ಹತ್ತಿರ, ಒಂದು ಚೇರ್ ಇಟ್ಟುಕೊಂಡು ಅದರ ಮೇಲೆ ಹತ್ತಿ, ಬೀಗ ತೆಗೆದು ನೋಡುವ ಯೋಚನೆ ಮಾಡಿದರು. ಎಲ್ಲಾದರೂ ಬೀಗ ತೆಗೆದಾಗ ಅದು ಈ ಕಡೆ ನುಗ್ಗಿ ಬಿಟ್ಟರೆ ಎಂದು ನಮ್ಮನ್ನೂ ಸೋಫಾ ಏರಿ ಕೂರುವಂತೆ ಹೇಳಿದರು. ಕುರ್ಚಿ ಹತ್ತಿ, ಅಪ್ಪ ಅಮ್ಮ ನಿಧಾನವಾಗಿ ಆಫೀಸ್ ರೂಮಿನ ಬಾಗಿಲು ತೆಗೆದು ನೋಡಿದರೆ ಆ ಭರ್ಜರಿ ಸರ್ಪ, ಹೊಸಲಿನ ಪಕ್ಕವೇ ಮಲಗಿದೆ! ತಕ್ಷಣ ಧಡಾರ್ ಎಂದು ಬಾಗಿಲು ಹಾಕಿ ಅಪ್ಪ ಬೀಗ ಹಾಕಿದರು. ಇದು ಸರ್ಪವನ್ನು ಸಿಕ್ಕಾಪಟ್ಟೆ ಕೆರಳಿಸಿತು. ಸುಮಾರು ಅರ್ಧ ಗಂಟೆಗಳ ಕಾಲ, ಅದು ರೌದ್ರಾವತಾರ ತಾಳಿ ಭುಸುಗುಡುತ್ತಾ ನೆಲಕ್ಕೆ ಅಪ್ಪಳಿಸುವ ಶಬ್ದ, ನಮ್ಮ ಕಿವಿಗಳಿಗೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಅಮ್ಮ ತಕ್ಷಣ ದೇವರ ಕೋಣೆಗೆ ತೆರಳಿ 'ಅದನ್ನು ಮನೆಯಿಂದ ಹೊರಗೆ ಕಳಿಸಪ್ಪಾ, ನಾವೇನು ಅದಕ್ಕೆ ತೊಂದರೆ ಮಾಡಿಲ್ಲ' ಎಂದು, ಹಾವುಗಳ **HOD** ಆದ, ನಮ್ಮ ಮನೆ ಸಮೀಪದ ಸುಬ್ರಹ್ಮಣ್ಯಸ್ವಾಮಿಗೆ ಹರಕೆ ಹೊತ್ತಳು! ನಾವೆಲ್ಲರೂ ಮತ್ತೊಮ್ಮೆ ಎಲ್ಲಾ ಕಿಟಕಿ ಬಾಗಿಲುಗಳನ್ನು ಭದ್ರಪಡಿಸಿಕೊಂಡು, ಹಾವಿನ ಭಯದಲ್ಲೇ ಮಲಗಿದೆವು. 'ಇನ್ನು ಬೆಳಗಿನವರೆಗೂ ಬಾಗಿಲು ತೆಗೆದು ನೋಡುವುದು ಬೇಡ. ಅಕಸ್ಮಾತ್ ಅದು ಏನಾದರೂ ಈ ಕಡೆ ನುಗ್ಗಿತು ಎಂದರೆ ಅಪಾಯ ಕಟ್ಟಿಟ್ಟ ಬುತ್ತಿ. ನಾವು ಮಲಗಲು ಬೇರೆಯವರ ಮನೆಗೆ ಹೋಗ ಬೇಕಾಗುತ್ತದೆ. ದೇವರ ಮೇಲೆ ಭಾರ ಹಾಕಿ ಮಲಗೋಣ ನಾಳೆ ಬೆಳಗಾಗುವುದರೊಳಗೆ ಅದು ಹೊರ ಹೋಗಿರುತ್ತದೆ' ಎಂದು ನಮಗೆಲ್ಲಾ ಧೈರ್ಯ ತುಂಬಿದಳು.

ಮರುದಿನ ಬೆಳಗ್ಗೆ ಎದ್ದೊಡನೆ ಹಾವು, ಹೊರಗೆ ಹೋಗಿದ್ಯಾ ಅಥವಾ ಅಲ್ಲೇ ಠಿಕಾಣಿ ಹೂಡಿದೆಯೋ ಎಂದು ನೋಡುವ ಕುತೂಹಲ ನಮಗೆ! ಈ ಬಾರಿ ಕುರ್ಚಿ ಹತ್ತಿ ಬಾಗಿಲು ತೆಗೆದಾಗ ಹಾವು ಅಲ್ಲಿರಲಿಲ್ಲ. ಅದು ಆಫೀಸ್ ರೂಮಿನ ತುಂಬಾ ಓಡಾಡಿದ ಪಟ್ಟೆ, ನೆಲದ ಮೇಲಿತ್ತು. ಕೋಣೆ ತುಂಬೆಲ್ಲಾ ಓಡಾಡಿ, ಕೊನೆಗೂ ನಾವು ಇಟ್ಟಿದ್ದ ಚೇರ್ ಹತ್ತಿ, ಕಿಟಕಿ ಮೂಲಕ ಹೊರ ಹೋಗಿ ತನ್ನ ಮನೆ ಸೇರಿಕೊಂಡಿತ್ತು! ನಾವು ನೆಮ್ಮದಿಯ ನಿಟ್ಟುಸಿರುಬಿಟ್ಟೆವು! ಅಮ್ಮನ ಹರಕೆ ಫಲಕೊಟ್ಟಿತ್ತು!

ಪ್ರತಿಕ್ರಿಯಿಸಿ: **feedback@sudha.co.in**



ಸಾಂದರ್ಭಿಕ ಚಿತ್ರ